# ಪುಟ್ಟದೊಂದು ಲೋಕ

ಮಕ್ಕಳು ಹೆದರಿಸುವ ಕಣ್ಣುಗಳ ನೆಟ್ಟನೋಟ
ನೆಲದ ಮೇಲಿನ ತುಂಟ ಕಾಲುಗಳು,
ಮಕ್ಕಳು ಹತಾಶ ಉದ್ದೇಶಗಳ ಒಡಲೊಳಗೆ ಹೊಳೆವ ಸೂರ್ಯರು
ವಿಜ್ಞಾನಸಂತುಷ್ಟ ಜಗತ್ತಿನ ಕಲ್ಪನೆಗಳು.

ಉಂಗುರದ ಬಂಗಾರದಲ್ಲಿ ಅನಂತ ಗಲಿಬಿಲಿಗಳು
ಅರೆನಿದ್ರೆಯಲ್ಲಿ ಕೋಮಲ ಪದಗಳ ಪಿಸುಮಾತು,
ಬೆಚ್ಚನೆ ಕೋಣೆಯ ಗೋಡೆಮೇಲೆ ಕನಸು ಕಾಣುವ
ಹಕ್ಕಿಗಳ, ಕುರಿಗಳ ಶಾಂತಚಿತ್ರಗಳು

ಮಕ್ಕಳೆಂದರೆ, ಮುಸ್ಸಂಜೆ, ಆರಾಮಸೋಫದ ಮೇಲಿನ ಸಾಯಂಕಾಲ,
ಕಿಟಕಿಯಾಚೆ ಮಂಜಿನಲ್ಲಿ ಮಿನುಗುವ ಬೀದಿದೀಪಗಳು.
ರಾಜನ ಕತೆಯ ತಾಳಬದ್ಧ ದನಿಗಳು,
ಕತೆಯಲ್ಲಿನ ಕಡಲ ಮತ್ಸ್ಯಕನ್ಯೆಯರು.

ಮಕ್ಕಳೆಂದರೆ ವಿಶ್ರಾಂತಿ, ಅರೆಕ್ಷಣದ ವಿರಾಮ
ದೇವರ ಕಣ್ಣುಗಳೆದುರಿನ ನಡುನಡುಗುವ ಆಣೆಪ್ರಮಾಣ,
ಮಕ್ಕಳು ಈ ಜಗತ್ತಿನ ಕೋಮಲ ಒಗಟುಗಳು,
ಒಗಟಿನ ಒಳಗೇ ಅಡಗಿ ಕುಳಿತಿದೆ ಉತ್ತರ!



**● ಮರಿನಾ ಇವನೋವ್ನ ತ್ವೆತಯೇವ**

**ಮರಿನಾ ಇವನೋವ್ನ ತ್ವೆತಯೇವ** Ivanovna Tvetaeva (1892–1941)

ರಷ್ಯಾ ದೇಶದ ಪ್ರಸಿದ್ಧ ಕವಿಗಳಲ್ಲಿ ಒಬ್ಬರು. ರಷ್ಯನ್ ಕ್ರಾಂತಿ, ಮಾಸ್ಕೋ ನಗರದ ಬರಗಾಲ ಮುಂತಾದ ಮಹತ್ವದ ಘಟನೆಗಳನ್ನು ನೇರವಾಗಿ ಅನುಭವಿಸಿದವರು. ಹಸಿವಿನಿಂದ ಕಾಪಾಡಲೆಂದು ಅನಾಥಾಲಯಕ್ಕೆ ಸೇರಿಸಿದ ಇವರ ಮಗಳು ಅಲ್ಲಿಯೇ ಮೃತಳಾದಳು. ಇಡೀ ಕುಟುಂಬವು ಕೆಲವು ವರ್ಷಗಳನ್ನು ಪ್ಯಾರಿಸ್‌ನಲ್ಲಿ ಬಡತನದಲ್ಲಿ ಕಳೆಯಿತು. ಮತ್ತೆ ರಷ್ಯಾಗೆ ಹಿಂದಿರುಗಿದಾಗ ಅವರ ಪತಿ ಮತ್ತು ಮಗಳನ್ನು ದೇಶದ್ರೋಹದ ಆಪಾದನೆಯ ಮೇಲೆ ಬಂಧಿಸಿದರು. ಗಂಡನನ್ನು ಗಲ್ಲಿಗೇರಿಸಲಾಯಿತು. ಈಕೆ 1941ರಲ್ಲಿ ಆತ್ಮಹತ್ಯೆ ಮಾಡಿಕೊಂಡರು. ತೀವ್ರವಾದ ಭಾವಗೀತಾತ್ಮಕತೆ ಇವರ ಕಾವ್ಯದ ಮುಖ್ಯ ಗುಣ. ಪ್ರಸಿದ್ಧ ಜರ್ಮನ್ ಕವಿ ರೈನರ್ ಮರಿಯಾ ರಿಲ್ಕ್, ರಷ್ಯನ್ ಕಾದಂಬರಿಕಾರ ಬೋರಿಸ್ ಪ್ಯಾಸ್ತರ್‌ನಾಕ್ ಮುಂತಾದವರ ನಿಕಟ ಸಂಪರ್ಕ ಇವರಿಗೆ ಇತ್ತು.